ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ.9063/2022

ಸಿ.ಡಬ್ಲ್ಯೂ -03
ಪಿ.ಡಬ್ಲ್ಯೂ-03

ಸಾಕ್ಷಿದಾರನ ಹೆಸರುಃ- ಚೌಡಮ್ಮ
ತಂದೆಯ ಹೆಸರು ವೆಂಕಟೇಶಯ್ಯ
ವಯಸ್ಸು 65 ವರ್ಷ
ಉದ್ಯೋಗ ವ್ಯವಸಾಯ
ವಾಸ ದೊಡ್ಡಕಳ್ಳಳ್ಳಿ

**ಸಾಕ್ಷಿಗೆ ದಿಃ 15.04.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಚಾಸಾ 1 ನನ್ನ ಗಂಡ ಆಗಬೇಕು. ಆರೋಪಿತರು ನನಗೆ ಗೊತ್ತು. 4 ವರ್ಷಗಳ ಹಿಂದೆ ನಮ್ಮ ಗದ್ದೆಯ ಹತ್ತಿರ ನಾನು ಮತ್ತು ಚಾಸಾ 1 ಅವರು ದನಗಳನ್ನು ಮೇಯಿಸಲು ಹೋಗಿ 5 ಗಂಟೆಗೆ ಮರಳಿ ಬೋರೆಗೌಡ ಅವರ ಮನೆಯ ಹತ್ತಿರ ಬರುತ್ತಿರುವಾಗ ಆರೋಪಿ 1 ಚಾಸಾ 1 ಅವರಿಗೆ ದೊಣ್ಣೆಯಿಂದ ತಲೆಗೆ ಮತ್ತು ಎಡಗಡೆ ಕೈಗೆ ಹೊಡೆದಿರುತ್ತಾರೆ. ಜಮೀನಿನ ದಾರಿ ವಿಚಾರಕ್ಕೆ ಹೊಡೆದಿರುತ್ತಾರೆ. ಆರೋಪಿ 1 ಚಾಸಾ 1 ಅವರಿಗೆ ಹೊಡೆಯುತ್ತಾ ನಮ್ಮ ಮನೆಯ ಹತ್ತಿರ ಬಂದಿರುತ್ತಾರೆ. ಚಾಸಾ 1 ಅವರೇ ಅಂಬ್ಯೂಲೇನ್ಸಗೆ ಕರೆ ಮಾಡಿ ಸರ್ಕಾರಿ ಆಸ್ಪತ್ರೆಗೆ ಕುಣಿಗಲ್ ಗೆ ಬಂದಿರುತ್ತಾರೆ. ನಾನು ಮತ್ತು ಚಾಸಾ 2 ಸ್ಥಳದಲ್ಲಿದ್ದೇವು. ಚಾಸಾ 1 ಅವರು ದೂರನ್ನು ನೀಡಿರುತ್ತಾರೆ. ಮು. ಮಾ. ಅನ್ನು ಗುರುತಿಸುತ್ತೇನೆ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಿಲಾಗಿದೆ. )**

**ಪಾಟೀ ಸವಾಲುಃ ಸಹಾಯಕ ಅಭಿಯೋಜಕರಿಂದಃ**

ಚಾಸಾ 1 ಮತ್ತು ಅವರ ಅಣ್ಣನಾದ ತಿಮ್ಮಯ್ಯ ಮತ್ತು ಅವರ ಮಕ್ಕಳು ನಮ್ಮ ಮನೆಯ ಮುಂಬಾಗ ಓಡಾಡು ವಿಚಾರಕ್ಕೆ ಮತ್ತು ಸಣ್ಣ ಪುಟ್ಟ ವಿಚಾರಕ್ಕೆ ಜಗಳ ಮಾಡುತ್ತಿದ್ದರು ಎಂದರೆ ಸರಿ. ಅವರು ನಮ್ಮ ಜೊತೆ ಮಾತನಾಡಿರುತ್ತಿರಲಿಲ್ಲ ಮತ್ತು ದ್ವೇಷ ಸಾಧಿಸುತ್ತಿದ್ದರು ಎಂದರೆ ಸರಿ. ದಿಃ 14.10.2022 ರಂದು ಮದ್ಯಾಹ್ನ ನಾನು ಮತ್ತು ಚಾಸಾ 1 ಎಮ್ಮೇಗಳನ್ನು ಹೊಡೆದುಕೊಂಡು ಗದ್ದೆಗೆ ಹೋಗಿದ್ದು ಮರಳಿ 5.30 ಗಂಟೆಗೆ ಮನೆಗೆ ಹೋಗುವ ಸಮಯದಲ್ಲಿ ಹೊಡೆದುಕೊಂಡು ಬರುತ್ತಿರುವಾಗ ಆರೋಪಿತರು ನಮ್ಮ ಮೇಲೆ ಗಲಾಟೆ ಮಾಡಬೇಕೆಂಬ ಉದ್ದೇಶದಿಂದ ಎಲ್ಲರೂ ಸೇರಿ ಗಲಾಟೆ ಮಾಡಿರುತ್ತಾರೆ ಎಂದರೆ ಸರಿ. ಆರೋಪಿ 1 ಚಾಸಾ 1 ಅವರ ಎಡಬುಜಕ್ಕೆ ಸಹ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿ 2 ಅಲ್ಲೇ ಬಿದ್ದಿದ್ದ ಕಲ್ಲನ್ನು ತಗೆದುಕೊಂಡು ಚಾಸಾ 1 ಅವರ ಎಡತೋಳಿಗೆ ಹೆಡೆದು ಗಾಯ ಪಡಿಸಿರುತ್ತಾನೆ. ಆಗ ನಾನು ಮತ್ತು ಚಾಸಾ 2 ಅವರು ಜಗಳ ಬಿಡಿಸಿರುತ್ತೇವೆ ಎಂದರೆ ಸರಿ. ಆರೋಪಿತರು ನಂತರ ಚಾಸಾ 1 ಅವರಿಗೆ ಕೊಲೆ ಬೆದರಿಕೆ ಹಾಕಿ ಹೋಗಿರುತ್ತಾರೆ ಎಂದರೆ ಸರಿ. ಆಗ ನಾನು ಮತ್ತು ಚಾಸಾ 2 ಅವರು ಚಾಸಾ 1 ಅವರನ್ನು ಉಪಚರಿಸಿರುತ್ತೇವೆ ಎಂದರೆ ಸರಿ. ಸಾರ್ವಜನಿಕರ ಸಹಾಯದಿಂದ ಚಾಸಾ 1 ಅವರನ್ನು ಅಂಬ್ಯಾಲೇಸ್ಸನಲ್ಲಿ ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆ ಕೊಡಿಸಿರುತ್ತೇವೆ ಎಂದರೆ ಸರಿ. ಈ ವಿಚಾರವಾಗಿ ಚಾಸಾ 1 ಅವರು ದಿಃ 15.10.2022 ರಂದು ದೂರನ್ನು ನೀಡಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಕಲ್ಲಿನಿಂದ ಆರೋಪಿ 2 ಚಾಸಾ 1 ಅವರನ್ನು ಹೊಡೆದಿರುತ್ತಾನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿತರ ಪರಃ ಆರ್.ಕೆ.ಆರ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಸಾಕ್ಷಿ ನುಡಿಯಲು ನನಗೆ ಯಾರು ಹೇಳಿರುವುದಿಲ್ಲ. ಜಮೀನು ವಿಚಾರವಾಗಿ ಆರೋಪಿತರ ಮತ್ತು ಚಾಸಾ 1 ಅವರ ನಡುವೆ 4-5 ಪ್ರಕರಣಗಳು ಇವೆ ಎಂದರೆ ಸರಿ. ನಾನು ಸಹ ಚಾಸಾ 1 ಅವರ ಜೊತೆ ದನ ಮೇಯಿಸಲು

ಹೋಗಿರುವುದಿಲ್ಲವೆಂದರೆ ಸರಿಯಲ್ಲ. ಒಂದುವೇಳೆ ಗಲಾಟೆಯ ಸಮಯದಲ್ಲಿ ನಾನು ಹಾಜರಿದ್ದರೆ ದೂರಿನಲ್ಲಿ ಈ ವಿಚಾರ ಬರೆಸುತ್ತಿದ್ದರು ಎಂದರೆ ಸರಿಯಲ್ಲ.

ನಾನು ಹೇಳಿಕೆಯನ್ನು 2 ದಿನಗಳ ಬಳಿಕ ನೀಡಿದ್ದು ದಿನಾಂಕ ನನಗೆ ನೆನಪಿಲ್ಲ ಹೇಳಿಕೆಯಲ್ಲಿ ಏನು ಬರೆದಿದ್ದಾರೆಂದರೆ ನನಗೆ ಗೊತ್ತಿಲ್ಲ. ಮು. ಮಾ. ಗಳಂತಹ ಕಲ್ಲು ಊರಿನಲ್ಲಿ ಸಿಗುತ್ತವೆ ಎಂದರೆ ಸರಿ. ಮು. ಮಾ. ಗಳಂತಹ ದೊಣ್ಣೆ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ನಾನು ಚಾಸಾ 1 ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದು ಆ ದಿನ ಸ್ಥಳದಲ್ಲಿ ಇರಲಿಲ್ಲವೆಂದರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.